ಮೂಲ ದಾವಾ ಃ 124-2011 ಪಿಡಬ್ಲು-3

ಸಾಕ್ಷಿಯನ್ನು ದಿನಾಂಕಃ 20-02-2017 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ ಪಿ ಎಸ ಬಿ ವಕೀಲರಿಂದಃ

ನನ್ನ ಮಾವನ ಹೆಸರು ನಬೀಸಾಬ್. ನನ್ನ ಗಂಡನೊಂದಿಗೆ ಒಟ್ಟು 4 ಜನ ಸಹೋದರ ಸಹೋದರಿಯರಿರುತ್ತಾರೆ. ಮೊದಲನೆಯವರು ರಾಜೇಸಾಬ್, 2ನೇಯವರು ನಜೀರಅಹಮದ್, 3ನೇಯವರು ಇಮಾಮ, 4ನೇಯವರು ರಿಹಾನ. 5ನೇಯವರು ದಾವಲಮಾ. ನನ್ನ ಮಾವ ತೀರಿಕೊಂಡಿದ್ದಾರೆ. ನನ್ನ ಅತ್ತೆ ಇದ್ದಾರೆ. ನನ್ನ ಮಾವನಿಗೆ ನೇಸರ್ಗಿ ಎಂಬ ಅಡ್ಡ ಹೆಸರು ಬರಲು ಕಾರಣ ಅವರು ಮೂಲ ಬೈಲಹೊಂಗಲ ತಾಲೂಕು ನೇಸರ್ಗಿ ಗ್ರಾಮದವರು. ನೇಸರ್ಗಿ ಗ್ರಾಮದಲ್ಲಿ ಅವರಿಗೆ ಯಾವುದೇ ಹೊಲ ಮನಿ ಇಲ್ಲ. ಅವರು ಬೈಲಹೊಂಗಲದಲ್ಲಿದ್ದರು. ನನ್ನ ಮದುವೆ ಅಜಮಾಸು 30 ವರ್ಷದಹಿಂದೆ ಆಗಿದೆ. ನನ್ನ ಗಂಡನ ನಜೀರ ಅಹ್ಮದ್ ಕಲಘಟಗಿಯಲ್ಲೇ ವಾಸ ಮಾಡುತ್ತಾರೆ. ನನಗೆ 3 ಜನ ಮಕ್ಕಳು. ನನ್ನ ಗಂಡನಿಗೆ ನಮ್ಮ ಮಾವನಿಂದ ಯಾವುದೇ ಆಸ್ತಿ ಬಂದಿಲ್ಲ. ಕಾರಣ ಅವರಬಳಿ ಯಾವುದೇ ಆಸ್ತಿ ಇರುವುದಿಲ್ಲ.

ಈ ಹಿಂದೆ ಇದೇ ದಾವೆಯಲ್ಲಿ ಶ್ರೀಕಾಂತ ಕಟಾವಕರ್ ಹಾಗೂ ರಾಮ ತಹಶೀಲ್ದಾರ್ ರವರು ನಮ್ಮ ಪರವಾಗಿ ಸಾಕ್ಷ್ಯನುಡಿದಿದ್ದಾರೆ ಅಂದರೆ ಸರಿ. ಅವರುಗಳನ್ನು ನಾನು ಕೇಳಿಕೊಂಡ ಮೇರೆಗೆ ಬಂದು ಸಾಕ್ಷಿ ಹೇಳಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ದಾವೆ ವಿಚಾರ ತಿಳಿದು ಬಂದು ಸಾಕ್ಷಿ ನುಡಿದಿರುತ್ತಾರೆಂದು ನುಡಿಯುತ್ತಾರೆ. ದಾವೆ ನಡೆಯುತ್ತಿದ್ದ ಬಗ್ಗೆ ಶ್ರೀಕಾಂತ ಮತ್ತು ರಾಮ ರವರಿಗೆ ನಾವೇ ತಿಳಿಸಿದ್ದೆವು. ದಾವೆ ನಡೆಯುತ್ತಿದ್ದ ವಿಚಾರ ನಾವೇ ಅವರಿಗೆ ತಿಳಿಸಿದ ಮೇರೆಗೆ ಅವರುಗಳು ಬಂದು ಸಾಕ್ಷಿ ಹೇಳಿದ್ದಾರೆಂದರೆ ಸಾಕ್ಷಿಯು ಅವರಿಗೆ ವಿಚಾರ ಗೊತ್ತಿದ್ದ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿದ್ದರು ಅಂತ ನುಡಿಯುತ್ತಾರೆ. ನನ್ನ ಗಂಡನನ್ನು ನಜೀರ್ ಅಹ್ಮದ್ ಅಂತ ಕರೆಯಲಾಗುತ್ತದೆ ಅಂದರೆ ಸರಿ. ನಜೀರ್‌ಸಾಬ್ ಅಂತ ಕರೆಯಲಾಗುವುದಿಲ್ಲ ಅಂದರೆ ಸರಿ.

ನಾನು ಗಾಂಧಿನಗರದಲ್ಲಿ ವಾಸ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ. ನಾನು 7ನೇ ತರಗತಿ ಶಾಲೆ ಕಲಿತಿದ್ದೇನೆ. ನನಗೆ ಇಂಗ್ಲೀಷ ಕನ್ನಡ ಓದಲು ಬರೆಯಲು ಬರುವುದಿಲ್ಲ. ಉರ್ದು ಮಾತನಾಡಲು ಬರುತ್ತದೆ. ವಾದ ಪತ್ರದಲ್ಲಿ ನನ್ನ ಗಂಡನ ಹೆಸರು ನಜೀರ್‌ಸಾಬ್ ಅಂತ ಬರೆದಿದೆ ಅಂದರೆ ಆ ಬಗ್ಗೆ ನನಗೆ ತಿಳಿದಿಲ್ಲ. ದಾವೆ ನಡೆಸಲು ನನ್ನ ಸಹೋದರ ಸಹೋದರಿಯರು ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ ಆದರೆ ಜವಾಬ್ದಾರಿ ಕೊಟ್ಟಿರುತ್ತಾರೆ. ಜವಾಬ್ದಾರಿ ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ.

ವಾದ ಪತ್ರದಲ್ಲಿ ಬರೆದ ವಿಚಾರದ ಬಗ್ಗೆ ತಿಳಿದಿಲ್ಲ ಕಾರಣ ನನಗೆ ಇಂಗ್ಲೀಷ ಓದಲು ಬರುವುದಿಲ್ಲ. ವಾದ ಪತ್ರ ಸಲ್ಲಿಸುವ ಪೂರ್ವದಲ್ಲಿ ಪಕ್ರುಸಾಬ್ ಹಾಗೂ ಅವರ ತಂದೆ ಮೆಹಬೂಬ್‌ಸಾಬ್ ರವರಿಗೆ ದಾವಾ ಆಸ್ತಿ ಹೇಗೆ ಬಂದಿದೆ ಎಂದು ಉತಾರ ತೆಗೆಸಿ ನೋಡಿಲ್ಲ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆದ ಆದೇಶವನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಸದರಿ ಆದೇಶದಲ್ಲಿ ಜಮೀನು ವ್ಯವಹಾರ ಖರೀದಿ ಪತ್ರ ಮೂಲಕ ಆಗಿದೆ ಅಂತ ಬರೆದಿದೆ ಅಂದರೆ ಸಾಕ್ಷಿಯು ಭಕ್ಷೀಸು ಪತ್ರದ ಮೂಲಕ ವ್ಯವಹಾರ ಆಗಿದೆ ಅಂತ ನುಡಿಯುತ್ತಾರೆ. ಖರೀದಿ ಪತ್ರದ ಮೂಲಕ ವ್ಯವಹಾರ ಆದ ಕಾರಣ ಜಿಲ್ಲಾಧಿಕಾರಿಗಳು ಮಾಡಿರುವ ಆದೇಶ ತಪ್ಪಾಗಿದೆ ಅಂದರೆ ಸರಿಯಲ್ಲ. ಇದೇ ಕಾರಣದಿಂದ ಜಿಲ್ಲಾಧಿಕಾರಿಯವರು ಆಶಾ ಬಿ ರವರು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಿದ್ದಾರೆಂದರೆ ಸರಿಯಲ್ಲ.

ನನ್ನ ತಾಯಿ ತೀರಿಕೊಂಡ ನಂತರ ವಾರ್ಸಾ ಸರ್ಟಿಫಿಕೇಟ್ ಪಡೆದಿದ್ದೇವೆ. ಸದರಿ ಪತ್ರವನ್ನು ನ್ಯಾಯೊಲಯಕ್ಕೆ ಹಾಜರು ಮಾಡಿಲ್ಲ. ಫಕ್ರುಸಾಬ್ ತಂದೆ ಮೆಹಬೂಬ್ಸಾಬ್ ವಾಲೀಕಾರ್ ರವರಿಗೆ ಕುಂಡಾನವರ್ ಅಂತ ಅಡ್ಡ ಹೆಸರು ಇತ್ತು ಅಂದರೆ ಸರಿ. ಪಕ್ರುಸಾಬ್ ಮತ್ತು ಸೈದುಸಾಬ್ ನಡುವೆ ನ್ಯಾಯೊಲಯದಲ್ಲಿ ಒಂದು ದಾವೆ ನಡೆಯುತ್ತಿತ್ತು ಅಂದರೆ ನನಗೆ ಗೊತ್ತಿಲ್ಲ. ಪಕ್ರುಸಾಬ್ ತಂದೆ ಮೆಹಬೂಬ್ಸಾಬ್ ರವರು ದಾವಾ ಆಸ್ತಿಗಳನ್ನು ವಾಲೀಕಾರಿಕೆ ಮಾಡುತ್ತಿದ್ದ ಮೇರೆಗೆ ಅವರಿಗೆ ರೈತನಾತೆ ಸಾಗುವಳಿ ಮಾಡುತ್ತಿದ್ದರು ಅಂದರೆ ಗೊತ್ತಿಲ್ಲ. ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದ ಸಲುವಾಗಿ ಅವರಿಗೆ ಭ ೂನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಅಂದರೆ ನನಗೆ ಗೊತ್ತಿಲ್ಲ. ಮಂಜೂರಾದ ನಂತರ ಪಕ್ರುಸಾಬ್ ಈ ದಾವಾ ಆಸ್ತಿ ಮತ್ತು ಇನ್ನೆರಡು ಆಸ್ತಿಗಳನ್ನು ಅವರ ಹೆಸರಿಗೆನಮೂದು ಮಾಡಬೇಕೆಂದು ಅರ್ಜಿಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ